# ಐತಿಹಾಸಿಕ ಪಾರಂಪರಿಕ ತಾಣ ಬೆಳಗಲಿ

**ಮಹಾಲಿಂಗ ರಂಗಾಪೂರ**

ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ತೇರದಾಳ.

DOI: https://doi.org/10.5281/zenodo.17296725

## ABSTRACT:

ಬಾದಾಮಿ ಚಾಲುಕ್ಯರು ಹಾಗೂ ಕಲ್ಯಾಣ ಚಾಲುಕ್ಯರ ಆಡಳಿತಾವಧಿಯಲ್ಲಿದ್ದ ಒಂದು ನಾಡು ಬೆಳಗಲಿ. ಇಂದಿನ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಒಂದು ಪಟ್ಟಣ ಪಂಚಾಯತಿ ಆಗಿರುವ ಈ ಗ್ರಾಮವು ಕವಿಚಕ್ರವರ್ತಿ ರನ್ನನ ಜನ್ಮಸ್ಥಳ ಎಂದು ಹೇಳಲಾಗಿದೆ. ಪ್ರವಾಸೋದ್ಯಮ ಇಲಾಖೆಯು ಗುರುತಿಸಿರುವ 2015–2025 ವರೆಗಿನ ಪಟ್ಟಿಯಲ್ಲಿ ಬಾಗಲಕೋಟೆ ಜಿಲ್ಲೆಯ 14 ತಾಣಗಳು ಮಾತ್ರ ಇದ್ದವು. ಸದ್ಯ ಹೊಸದಾಗಿ 13 ತಾಣಗಳನ್ನು ಗುರುತಿಸಿದ್ದು ಅವುಗಳಲ್ಲಿ ಸ್ಥಾನ ಪಡೆದ ಒಂದು ಸ್ಥಳವೆಂದರೆ ಅದು ಬೆಳಗಲಿಯ ಅಮೃತೇಶ್ವರ ದೇವಾಲಯವಾಗಿದೆ. ಇದು ಮಾತ್ರವಲ್ಲದೆ ಇಲ್ಲಿ ಶ್ರೀ ಮಹಾಲಿಂಗೇಶ್ವರ ದೇವಾಲಯ, ಪರಮಾನಂದ ದೇವಾಲಯ, ರಾಮಲಿಂಗೇಶ್ವರ ದೇವಾಲಯ, ರೂಪಿಣಿ ದೇವಾಲಯಗಳು ಇರುವುದಲ್ಲದೆ ಸಾಕಷ್ಟು ಸಂಖ್ಯೆಯ ಶಾಸನಗಳು ಕಂಡುಬಂದಿರುವುದರಿಂದ ಇದೊಂದು ಪ್ರಮುಖ ಐತಿಹಾಸಿಕ ಸ್ಥಳವೆಂದು ಹೇಳಬಹುದಾಗಿದೆ. ಅನೇಕ ಪೌರಾಣಿಕ ಸಾಹಿತ್ಯ ಮತ್ತು ಪರಂಪರೆಗಳ ತಾಣವಾಗಿದೆ. ಗ್ರಾಮದಲ್ಲಿ ಒಟ್ಟು 60 ಶಿವಲಿಂಗಗಳಿದ್ದು ಹೀಗಾಗಿ ಇಲ್ಲಿ ಶೈವರ ಆಳ್ವಿಕೆ ಇತ್ತು ಎನ್ನಬಹುದಾಗಿದೆ. ಇಲ್ಲಿ ಈ ಊರಿನ ಗತವೈಭವವನ್ನು ಸಾರುವ ಅವಶೇಷಗಳು ಇನ್ನೂ ಕೂಡ ಲಭ್ಯವಾಗುತ್ತಿವೆ.

## KEYWORDS:

ಅಮೃತೇಶ್ವರ, ಜಂಬುಖಂಡಿ, ಮುದುವೊಳಲ್, ಸುಖನಾಸಿ, ಬಾವಿ.

**ಪೀಠಿಕೆ:**

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ರನ್ನ ಬೆಳಗಲಿ ಗ್ರಾಮವು ಹಲವಾರು ಐತಿಹಾಸಿಕ ದೇವಸ್ಥಾನಗಳನ್ನು ಹಾಗೂ ವಿಗ್ರಹಗಳನ್ನು ಹಾಗೆಯೇ ಅವಶೇಷಗಳನ್ನು ಇಲ್ಲಿ ನೋಡಬಹುದಾಗಿದೆ. ಪಟ್ಟಣದಲ್ಲಿ ಹೈಸ್ಕೂಲ್ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಕೆ.ಎ. ದಡೂತಿ ರವರ ಹೇಳಿಕೆ ಪ್ರಕಾರ ಇಲ್ಲಿ ಒಮ್ಮೆ ಸಾಹಿತಿಗಳಾದ ತೀ.ನಂ.ಶ್ರೀ ರವರು ಭೇಟಿ ನೀಡಿ ಇಲ್ಲಿ ಸೂರ್ಯ ದೇವಾಲಯ ಇತ್ತು ಎಂದು ತೀ.ನಂ.ಶ್ರೀರವರು ಉಲ್ಲೇಖಿಸಿರುವುದನ್ನು ನೆನೆಯುತ್ತಾರೆ. ಇದು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದ್ದು ಕಲ್ಯಾಣಿ ಚಾಲುಕ್ಯರ ಅವಧಿಯಲ್ಲಿ ಸಾಮಂತರಾಗಿದ್ದ ರಟ್ಟರು ಸಾಕಷ್ಟು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ಹಲವು ನಾಶವಾಗಿವೆ. ರನ್ನಬೆಳಗಲಿಯಲ್ಲಿರುವ BVVS ಹೈ ಸ್ಕೂಲ್‌ನಲ್ಲಿ ಹಲವು ಶಾಸನಗಳನ್ನು ವಿಗ್ರಹಗಳನ್ನು ಸಂರಕ್ಷಿಸಲಾಗಿರುವುದನ್ನು ಕಾಣಬಹುದು.

**ಬೆಳಗಲಿಯ ಐತಿಹಾಸಿಕ ಹಿನ್ನೆಲೆ:**

ಬೆಳಗಲಿಯಲ್ಲಿ ಸಿಕ್ಕಿರುವ ಒಂದು ಶಾಸನವನ್ನು ಜಮಖಂಡಿಯ ಡಬ್ಲೂ. ಟಿ. ಆಪ್ಟೆ ಅವರ ಮನೆಯಲ್ಲಿ ಸಂರಕ್ಷಿಸಲಾಗಿದ್ದು ಆ ಶಾಸನದಲ್ಲಿ ಒಂದನೇ ವಿಕ್ರಮ ವರ್ಷ ಹಾಗೂ ತ್ರಿಭುವನಮಲ್ಲದೇವನ ಉಲ್ಲೇಖವಿರುತ್ತದೆ. ಇದು 1076 ಕ್ಕೆ ಸಮನಾಗುತ್ತದೆ. ಕಲ್ಯಾಣಿ ಚಾಲುಕ್ಯರ 6 ನೇ ವಿಕ್ರಮಾದಿತ್ಯನ ಕಾಲಕ್ಕಾಗಲೇ ಬೆಳಗಲಿ ಗ್ರಾಮವು ತುಂಬಾ ಪ್ರಸಿದ್ಧಿ ಪಡೆದಿತ್ತು

ಎಂದು ನಾವು ತಿಳಿಯಬಹುದು.

ರನ್ನನು ದಾಖಲಿಸಿರುವಂತೆ ''ಜಂಬುಖಂಡಿ 70ರ ಸೀಮೆಯ ಬೆಳಗಲಿ 500 ಪಟ್ಟಣಕ್ಕೆ ಸೇರಿದ ಮುದುವೊಳಲು'' ಎಂದು ದಾಖಲಿತವಾಗಿರುವುದನ್ನು ಕಾಣಬಹುದು. ರನ್ನ ಬೆಳಗಲಿ ಪಟ್ಟಣದ ಐತಿಹಾಸಿಕ ಹಿನ್ನೆಲೆಯನ್ನು ಅವಲೋಕಿದಾಗ ಇದು ಮುಧೋಳ ಪ್ರಾಂತ್ಯಕ್ಕೆ ಸೇರಿತ್ತು ಎನ್ನುವ ಸ್ಪಷ್ಟ ಮಾಹಿತಿ ದೊರೆಯುತ್ತದೆ. ಇದನ್ನು ಪುಷ್ಟೀಕರಿಸಲು ಕವಿ ರನ್ನನು ಸ್ವತಃ ತನ್ನ ಕೃತಿಯಲ್ಲಿ ಈ ಪ್ರದೇಶಗಳ ಬಗ್ಗೆ ಹೇಳಿಕೊಂಡಿದ್ದಾನೆ. ಈ ಪ್ರದೇಶದಲ್ಲಿ ರಾಜಕೀಯ ವ್ಯವಸ್ಥೆ ಆರಂಭವಾಗುವುದು ಶಾತವಾಹನರ ಮಾಂಡಳಿಕರಾದ ನಂದ ವಂಶದ ಅರಸರಿಂದ. ಮುಧೋಳವನ್ನು ಹಾಗೆ ಇಡಿಯಾಗಿ ಬಾಗಲಕೋಟೆ ಜಿಲ್ಲೆಯನ್ನು ಆಳಿದ ಪ್ರಮುಖ ರಾಜಮನೆತನಗಳೆಂದರೆ ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಸವದತ್ತಿಯ ರಟ್ಟರು, ಬಿಜಾಪುರದ ಆದಿಲ್ ಶಾಹಿಗಳು, ಮುಧೋಳದ ಘೋರ್ಪಡೆ ಮನೆತನದವರು ಎಂದು ತಿಳಿದು ಬರುತ್ತದೆ. ವಿಜಯಪುರದ ಆದಿಲ್‌ಶಾಹಿಗಳು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದರು ಎಂಬುದಕ್ಕೆ ಸ್ಥಳೀಯ ಶ್ರೀ ಕಲ್ಮೇಶ್ವರ ದೇವಾಲಯದ ಲಲಾಟ ಶಾಸನ ಉದಾಹರಣೆಯಾಗಿ ನಿಲ್ಲುತ್ತದೆ. ಇದು ಇಸ್ಮಾಯಿಲ್ ಆದಿಲ್‌ಷಾನಿಗೆ ಸೇರಿದ ಶಾಸನವಾಗಿದೆ. ಮುಧೋಳದ ಘೋರ್ಪಡೆ ಮನೆತನದವರು ಆದಿಲ್ ಶಾಹಿ ಅರಸರ ಸಾಮಂತರಾಗಿ ಮುಂದುವರೆದರು. ಇವರು ಬಾಗಲಕೋಟೆ ಜಿಲ್ಲೆಯ ಮುಧೋಳವನ್ನು ಕೇಂದ್ರವಾಗಿಟ್ಟುಕೊಂಡು ಆಡಳಿತ ನಡೆಸಿದರು. ಆ ಸಂದರ್ಭದಲ್ಲಿ ಬೆಳಗಲಿ ಗ್ರಾಮವು ಇವರ ಅಧೀನದಲ್ಲಿತ್ತು. ಹೀಗೆ ಬೆಳಗಲಿಯೂ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ್ದು ಅದಕ್ಕೆ ಪುರಾವೆಯಾಗಿ ಪಟ್ಟಣದ ತುಂಬೆಲ್ಲ ಹಾಳು ಮಣ್ಣಿನ ಭೂಮಿ ಹೆಚ್ಚಾಗಿ ಕಂಡುಬರುತ್ತದೆ. ಅದನ್ನು ಅಗೆದಷ್ಟು ಭೂಮಿಯ ಅಂತರಾಳದಲ್ಲಿ ಅನೇಕ ಮನೆಗಳು, ದೇವಾಲಯಗಳು, ಶಿಲ್ಪ ಕಲಾ ಕೃತಿಗಳು, ಮೂರ್ತಿ ಶಿಲ್ಪಗಳು ಕಾಣಸಿಗುತ್ತವೆ. ಹೀಗಾಗಿ ಪ್ರಾಚೀನಪಟ್ಟಣವು ನೆಲದಲ್ಲಿ ಹೂತು ಹೋಗಿರಬಹುದು ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ. ಪ್ರಸ್ತುತವಾಗಿ ಪಟ್ಟಣದ ದಕ್ಷಿಣ ಭಾಗದಲ್ಲಿ ತಗ್ಗಾದ ಪ್ರದೇಶವಿದ್ದು, ಉತ್ತರದ ಭಾಗವು ಎತ್ತರವಾಗಿದೆ. ಪಟ್ಟಣದ ಸುತ್ತಲೂ ಕೋಟೆ ಮತ್ತು ಕಂದಕದ ಕುರುಹುಗಳು ಕಂಡುಬರುತ್ತವೆ.

**1. ಕವಿಚಕ್ರವರ್ತಿ ರನ್ನನ ಜನ್ಮಸ್ಥಳ:**

ಕನ್ನಡದ ಅಗ್ರಮಾನ್ಯ ಕವಿ ರನ್ನನ ಜನ್ಮಸ್ಥಳ ಇದಾಗಿದೆ ಎಂಬುದು ಬಹುತೇಕರು ಒಪ್ಪುವ ಅಂಶವಾಗಿದೆ. ರನ್ನನು ತನ್ನ ಕೃತಿಯಲ್ಲಿ ಉಲ್ಲೇಖಿಸಿರುವಂತೆ ಬೆಳುಗರೆ ನಾಡಿನಲ್ಲಿ ಬೆಳುಗಲಿ ದೇಶದ ಅಯ್ನೂರರೊಳುಲವಿನಿಸುವ ಜಂಬುಖಂಡಿಯೆಪ್ಪತ್ತಿಗೂ ತಿಳಕವಾದ ಮುದುವಳಲು ಎಂಬ ಗ್ರಾಮದಲ್ಲಿ ಕ್ರಿ.ಶ 949 ರಲ್ಲಿ ಜನಿಸಿದ. ರನ್ನನು ತಾನು ಜನಿಸಿದ ಬೆಳುಗಲಿ ನಾಡು ಸುಖ ಸಮೃದ್ಧಿಯಿಂದ ಕೂಡಿತ್ತೆಂದು ವರ್ಣಿಸುತ್ತಾನೆ.

**2. ಅಮೃತೇಶ್ವರ ದೇವಾಲಯ:**

ಕಲ್ಯಾಣಿ ಚಾಲುಕ್ಯರ ಕಾಲಾವಧಿಯಲ್ಲಿ ನಿರ್ಮಿತವಾದ ವೈಭವದ ಒಂದು ಶಿವ ದೇವಾಲಯ ಇದಾಗಿದೆ. ಸ್ಥಳೀಯವಾಗಿ ಈಶ್ವರಲಿಂಗ ದೇವಾಲಯವೆಂದು ಪ್ರಸಿದ್ಧವಾದ ಈ ದೇವಸ್ಥಾನವು ಬೃಹದಾಕಾರದ ಕಲ್ಲುಗಳಿಂದ ನಿರ್ಮಾಣವಾಗಿದೆ. ಲಕ್ಕುಂಡಿ ಮಾದರಿಯ ದೇವಾಲಯ ಕಲಾಶೈಲಿಯನ್ನು ಇಲ್ಲಿ ಕಾಣಬಹುದಾಗಿದೆ. ದೇವಾಲಯದ ಹೊರಗಡೆ ನೋಡಿದರೆ ಕಲ್ಯಾಣಿ ಚಾಲುಕ್ಯರ ಶಿಲ್ಪಕಲಾ ವೈಭವವನ್ನು ಕಾಣಬಹುದಾಗಿದೆ. ದೇವಾಲಯವು ನಕ್ಷತ್ರ ಆಕಾರದ ಜಗಲಿಯ ಮೇಲಿನ ನಿರ್ಮಾಣವಾಗಿದ್ದು ಪೂರ್ವಾಭಿಮುಖವಾಗಿದೆ.

ದೇವಾಲಯದಲ್ಲಿ ಗರ್ಭಗೃಹ, ಸುಖನಾಸಿ, ನವರಂಗ, ಮುಖಮಂಟಪಗಳನ್ನು ಕಾಣಬಹುದಾಗಿದೆ. ಗರ್ಭಗೃಹದಲ್ಲಿ ಬೃಹದಾಕಾರದ ಶಿವಲಿಂಗವನ್ನು ಕಾಣಬಹುದು. ಗರ್ಭಗೃಹದ ಮೇಲ್ಛಾವಣಿಯಲ್ಲಿ ನಾಭಿಚ್ಛಂದದ ರಚನೆಯಿದ್ದು ಇದರ ಮಧ್ಯಭಾಗದಲ್ಲಿ ಪದ್ಮದ ಅಲಂಕರಣೆಯಿದೆ. ಬಹುತೇಕ ಶೈವ ದೇವಾಲಯಗಳಲ್ಲಿ ನಂದಿಮಂಟಪ ದೇವಾಲಯದ ಹೊರಗಡೆ ಇದ್ದರೆ ಈ ದೇವಾಲಯದಲ್ಲಿ ಸುಖನಾಶಿಯಲ್ಲಿ ನಂದಿ ವಿಗ್ರಹವನ್ನು ಕಾಣಬಹುದಾಗಿದೆ. ಸುಖನಾಶಿಯಲ್ಲಿ ಜಾಲಂದ್ರದ ವ್ಯವಸ್ಥೆಯನ್ನು ಕಾಣಬಹುದು. ಸುಖನಾಶಿಯ ಬಲಗಡೆಗೆ ಕಾಲಭೈರವ ಲಿಂಗ, ಐದು ಹೆಡೆಯ ನಾಗಶೇಷ, ವಿಷ್ಣುವಿನ ಪಾದಗಳ ಹತ್ತಿರ ಸುಂದರ ಸ್ತ್ರೀ ದೇವತೆಗಳು, ಶ್ರೀ ಕೃಷ್ಣನ ನೃತ್ಯ ಭಂಗಿ, ಕೃಷ್ಣನಿಗೆ ನಮಿಸುತ್ತಿರುವ ಗೋಪಿಕೆಯರ ವಿಗ್ರಹಗಳನ್ನು ಕಾಣಬಹುದು. ದೇವಾಲಯದ ಮುಖಮಂಟಪದ ಭಾಗದಲ್ಲಿ ಮೂರು ಪ್ರವೇಶ ದ್ವಾರಗಳನ್ನು ಹೊಂದಿದೆ. ಪೂರ್ವ, ದಕ್ಷಿಣ, ಉತ್ತರಕ್ಕೆ ಒಂದೊಂದರಂತೆ ಮೂರು ಪ್ರವೇಶ ದ್ವಾರಗಳಿವೆ. ಉತ್ತರ ದ್ವಾರಕ್ಕೆ ನೇರವಾಗಿ ಬೃಹದಾಕಾರದ ಗುಂಡನೆಯ ಏಕಶಿಲಾ ಕಲ್ಲಿನ ಕಟ್ಟೆಯನ್ನು ಕೂಡ ಕಾಣಬಹುದು.

ಮುಖಮಂಟಪದಲ್ಲಿ ಒಟ್ಟು 22 ಕಂಬಗಳಿದ್ದು ಇವುಗಳಲ್ಲಿ ಹಲವು ಕಂಬಗಳು ಅತ್ಯಂತ ಸೂಕ್ಷ್ಮ ಕೆತ್ತನೆಯನ್ನು ಹೊಂದಿವೆ. ಪ್ರಮುಖವಾಗಿ ಗೆಜ್ಜೆಯ ಸಾಲು, ಆನೆಯ ಸಾಲು, ಎಲೆಯ ಕೆತ್ತನೆ, ಸರಪಳಿಯ ಕೆತ್ತನೆ, ಹೂವಿನ ಸಾಲು ಕೆತ್ತಲಾಗಿದೆ. ಕೆತ್ತನೆಯು ಕಂಬದಿಂದ ಕಂಬಕ್ಕೆ ವ್ಯತ್ಯಾಸ ಹೊಂದಿರುವುದನ್ನು ನಾವು ಗಮನಿಸಬಹುದು. ಜೀರ್ಣೋದ್ಧಾರದ ಸಂದರ್ಭದಲ್ಲಿ ಹೊಸದಾಗಿ 6 ಕಂಬಗಳನ್ನು ಜೋಡಿಸಲಾಗಿದೆ. ಹಳೆ ಕಂಬಗಳಲ್ಲಿ ಇರುವ ವಿಶೇಷವಾದಂತಹ ಶಿಲ್ಪಕಲೆ ಹೊಸ ಕಂಬಗಳಲ್ಲಿ ಮೂಡಿಬಂದಿಲ್ಲ. ಈ ಅಮೃತೇಶ್ವರ ದೇವಾಲಯದಲ್ಲಿ ಚಂದ್ರಮಾನ ಯುಗಾದಿ ಪಾಡ್ಯದಂದು ಸೂರ್ಯೋದಯದ ವೇಳೆ ಸೂರ್ಯನ ಕಿರಣಗಳು ಲಿಂಗದ ಮೇಲೆ ಬೀಳುವುದು ಇಲ್ಲಿನ ಒಂದು ವಿಶೇಷತೆಯಾಗಿದೆ.

### 3. ಮಹಾಲಿಂಗೇಶ್ವರ ದೇವಾಲಯ:

ಬೆಳಗಲಿಯಲ್ಲಿರುವ ಮಹಾಲಿಂಗೇಶ್ವರ ದೇವಾಲಯದಲ್ಲಿ ವಿಶಾಲವಾದ ಪ್ರಾಂಗಣ ಇದ್ದು, ಗರ್ಭಗೃಹ ನವರಂಗ ಹಾಗೂ ನಂದಿ ಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದೆ. ಕಲ್ಯಾಣ ಚಾಲುಕ್ಯರ ಶೈಲಿಯನ್ನು ಇಲ್ಲಿ ಗಮನಿಸಬಹುದಾಗಿದೆ. ನವರಂಗದಲ್ಲಿ ಅಲಂಕೃತ ಸ್ತಂಭಗಳನ್ನು ಕಾಣಬಹುದು.

### 4. ರೂಪಿಣಿ ದೇವಾಲಯ:

ಈ ದೇವಾಲಯವು ಸಂಪೂರ್ಣವಾಗಿ ಪಾಳು ಬಿದ್ದ ಸ್ಥಿತಿಯಲ್ಲಿದೆ. ದೇವಸ್ಥಾನದ ತಳಪಾಯ ಅಥವಾ ಅಧಿಸ್ಥಾನದ ಭಾಗ ಮಾತ್ರ ಉಳಿದುಕೊಂಡಿದ್ದು ಅದು ಭೂಮಿಯಲ್ಲಿ ಸಂಪೂರ್ಣವಾಗಿ ಹೂತು ಹೋಗಿದೆ. ದೇವಾಲಯದ ಅವಶೇಷಗಳನ್ನು ಇಂದಿಗೂ ಕಾಣಬಹುದಾಗಿದ್ದು, ಮುಖ್ಯವಾಗಿ ಸ್ತಂಭಗಳು, ತೊಲೆಗಳು, ಬಿತ್ತಿಯ ಅವಶೇಷಗಳು ಕಂಡುಬರುತ್ತವೆ. ಈ ದೇವಾಲಯದ ಅವಶೇಷಗಳನ್ನು ಗಮನಿಸಿದಾಗ ಗರ್ಭಗೃಹ, ಅಂತರಾಳ, ನವರಂಗ ಭಾಗಗಳನ್ನು ಹೊಂದಿದೆ ಎಂದು ಹೇಳಬಹುದು. ಆನೆ, ಮಕರ, ಅಲಂಕಾರಗಳಿಂದ ಕೂಡಿದ ಅನೇಕ ಬೃಹತ್ ಶಿಲೆಗಳನ್ನು ಇಲ್ಲಿ ಕಾಣಬಹುದು. ಕುದುರೆ ಹಾಗೂ ಶಿವನಿಗೆ ಸಂಬಂಧಿಸಿದ ಇಲ್ಲಿ ಕಂಡು ಬಂದಿರುವುದರಿಂದ ಶೈವ ದೇವಾಲಯವಾಗಿರಬಹುದು ಎಂದೂ ಕೂಡ ಹೇಳಲಾಗಿದೆ. ಈ ದೇವಾಲಯದ ಮುಂದೆ ಒಂದು ಪುಷ್ಕರಣಿ ಇದ್ದು ಸ್ಥಳೀಯರು ಇದನ್ನು ಗರಗದ ಬಾವಿ ಅಥವಾ ಗರಿಗ್ಯಾನ ಬಾವಿ

ಎಂದು ಕರೆಯುತ್ತಾರೆ. ಈ ದೇವಾಲಯ ಹಾಗೂ ಪುಷ್ಕರಣಿ ಗರಗದ ಎಂಬ ಮನೆತನದ ಕೃಷಿ ಭೂಮಿಯಲ್ಲಿರುವ ಕಾರಣದಿಂದಾಗಿ ಈ ರೀತಿ ಕರೆಯಲಾಗುತ್ತದೆ ಎಂದು ಮಾಹಿತಿಯನ್ನು ಸ್ಥಳಿಯರು ನೀಡುತ್ತಾರೆ.

**5. ಇತರೇ ದೇವಾಲಯಗಳು:**

ಚನ್ನಗಿರೀಶ್ವರ ದೇವಾಲಯ, ಮಲ್ಲಿಕಾರ್ಜುನ ದೇವಾಲಯ, ಬಂದಲಕ್ಷ್ಮಿ ದೇವಾಲಯ, ದುರ್ಗಾದೇವಾಲಯ, ಯಲ್ಲಮ್ಮದೇವಿ ದೇವಾಲಯ, ಹನುಮಂತ ದೇವಾಲಯ, ಪರಮಾನಂದ ದೇವಾಲಯ, ರಾಮಲಿಂಗೇಶ್ವರ ದೇವಾಲಯ, ರನ್ನ ಬೆಳಗಲಿಗೆ ಹೊಂದಿಕೊಂಡಂತೆ ಇರುವ ಮಳಲಿಯ ಕಲ್ಮೇಶ್ವರ ದೇವಾಲಯ ಇತ್ಯಾದಿ.

**6. ಬಾವಿಗಳು:**

ಧರೆಪ್ಪನವರ ಬಾವಿ, ದಂಡಿನವರ ಬಾವಿ (ಇದರ ಪಕ್ಕದ ದೇವಾಲಯದಲ್ಲಿ ಶಾಸನ ಸಿಕ್ಕಿದೆ), ಗರಗದ ಬಾವಿ (ಇದರ ಪಕ್ಕದಲ್ಲಿ ರೂಪಿಣಿ ದೇವಾಲಯವಿದೆ), ನಾಕೆತ್ತಿನ ಬಾವಿ (ಇಲ್ಲಿ ಆನೆ ಶಿಲ್ಪ, ಶಿವಲಿಂಗಗಳು, ನಾಗಮೂರ್ತಿಗಳು ಸಿಕ್ಕಿವೆ), ಪೆಟ್ಲೂರ ಬಾವಿ, ಹಿರೇಬಾವಿ/ ರಾಮಲಿಂಗೇಶ್ವರ ಬಾವಿ, ಬನದ ಬಾವಿ ಇತ್ಯಾದಿ ಐತಿಹಾಸಿಕ ಬಾವಿಗಳು ಬೆಳಗಲಿ ಗ್ರಾಮದಲ್ಲಿದ್ದು ಪ್ರತಿಯೊಂದು ಬಾವಿಯೂ ಇಲ್ಲಿನ ಪುರಾತನತೆಯನ್ನು ಸಾರುತ್ತಿವೆ.

**7. ಮೂರ್ತಿಶಿಲ್ಪ:**

ಈ ಗ್ರಾಮದ ಪಾದಗಟ್ಟಿ ಎಂದು ಕರೆಯಲ್ಪಡುವ ಸ್ಥಳದಲ್ಲಿ ಭಗ್ನಗೊಂಡ ಸ್ಥಿತಿಯಲ್ಲಿ ವಿಗ್ರಹಗಳು ಸಿಕ್ಕಿದ್ದು ಅದರಲ್ಲಿ ಪ್ರಮುಖವಾದದ್ದು ಮಹಿಶಾಸುರ ಮರ್ದಿನಿಯ ವಿಗ್ರಹ. ಯಲ್ಲಮ್ಮ ದೇವಾಲಯದಲ್ಲಿ ಕಣ್ಣುಗಳನ್ನು ತೆರೆದ ಕಿರೀಟಧಾರಿ ಪುರುಷನ ಮುಖ ಶಿಲ್ಪವಿದ್ದು ಅದರ ಉಳಿದ ಭಾಗ ನಾಶವಾಗಿದೆ. ಇತರೇ ಪ್ರಮುಖ ಮೂರ್ತಿಗಳೆಂದರೆ – ಜನಿವಾರ ಧರಿಸಿದ ಮನುಷ್ಯನ ವಿಗ್ರಹ, ಧಾರವಾಡದಲ್ಲಿರುವ ಎರಡು ಪ್ರಾಚ್ಯ ವಿಗ್ರಹಗಳು, ಅಲ್ಲದೇ ಸ್ತಳೀಯ ಬಿವಿವಿಎಸ್ ಹೈಸ್ಕೂಲ್‌ನ ಶಿಕ್ಷಕರಾದ ಶ್ರೀ ಕೆ.ಎ. ದಡೂತಿ, ಶ್ರೀ ಎ.ಎಂ. ಕಂಬಾರ ಮುಂತಾದವರು ಗ್ರಾಮಸ್ಥರ ನೆರವಿನಿಂದ ಒಂದಿಷ್ಟು ಶಿಲ್ಪಗಳನ್ನು ರಕ್ಷಿಸಿಟ್ಟಿದ್ದಾರೆ. ಇಲ್ಲಿ ಕಮಲ, ಹೂವಿನ ದಳಗಳ ಪಟ್ಟಿಕೆಗಳು, ಎಲೆ ಬಳ್ಳಿ ಕುಸುರಿ ಕೆಲಸದ ಕೆತ್ತನೆ ಒಳಗೊಂಡ ಶಿಲೆಗಳು, ಚಿಕ್ಕ ವಿಷ್ಣುವಿನ ಮೂರ್ತಿ, ಗಾಂಬೀರ್ಯ ಮುಖಚರ್ಯೆಯ ಮನುಷ್ಯನ ವಿಗ್ರಹ, ಒಂದೇ ವಿಗ್ರಹದಲ್ಲಿ ಮಕರ, ಹುಲಿ, ನವಿಲು ಸಮ್ಮಿಶ್ರಣದ ಹೋಲಿಕೆ ಇರುವ ವಿಗ್ರಹ, ಈಶ್ವರ ಮೂರ್ತಿ, ಭಗ್ನಗೊಂಡ ತೀರ್ಥಂಕರರ ವಿಗ್ರಹಗಳು, ಬಳ್ಳಿ ಸುತ್ತಿದ ರೀತಿಯಲ್ಲಿ ಕೆತ್ತಿದ ತೀರ್ಥಂಕರರ ವಿಗ್ರಹ, ಸ್ಥಳೀಯ ದತ್ತ ಮಂದಿರದ ಹತ್ತಿರ ಇರುವ 5 ಶಿವಲಿಂಗಗಳು, ಆನೆ ಮುಖದ ಕೆತ್ತನೆ, ಜೋಡಿ ನಾಗರ ಕೆತ್ತನೆ, ಕಲ್ಲಿನಲ್ಲಿ ದೃಷ್ಟಿಗೊಂಬೆಯ ಕೆತ್ತನೆ, ಕುದುರೆಯ ದೇಹ ಮೇಕೆಯ ಮುಖವಿರುವ ಆಕೃತಿಯ ಕೆತ್ತನೆ. ಹೀಗೆ ಇಲ್ಲಿನ ಒಂದೊಂದು ಶಿಲ್ಪವು ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿವೆ.

**ಉಪಸಂಹಾರ:**

ಹೀಗೆ ಕಲ್ಯಾಣಿ ಚಾಲುಕ್ಯರ ಆಡಳಿತದಲ್ಲಿದ್ದ ಬೆಳಗಲಿ ಗ್ರಾಮಕ್ಕೆ ಅಪರೂಪದ ಇತಿಹಾಸವಿದೆ. ಅಪರೂಪದ ಕೆತ್ತನೆಗಳು, ಅಪರೂಪದ ಶಿಲ್ಪಗಳು, ಸುಂದರವಾದ ದೇವಾಲಯಗಳನ್ನು ಒಳಗೊಂಡಿರುವ ಬೆಳಗಲಿಯಲ್ಲಿ ಇಂದಿಗೂ ಕೂಡ ಮನೆಗೆ ತಳಪಾಯ ಅಗೆಯುವ ಸಂದರ್ಭದಲ್ಲಿ ಸಾಕಷ್ಟು ವಿಗ್ರಹಗಳು, ಶಾಸನಗಳು ದೊರೆಯುತ್ತಿವೆ. ಇಲ್ಲಿ

ದೊರೆಯುವ ಪ್ರತಿಯೊಂದು ಅವಶೇಷಗಳಿಗೂ ತನ್ನದೇ ಆದ ಮಹತ್ವವಿದೆ. ಹಾಗಾಗಿ ಇಲ್ಲಿ ಹೆಚ್ಚಿನ ಸಂಶೋಧನೆ ನಡೆಸಿದರೆ ಶಾಸನಗಳು ಪತ್ತೆಯಾಗಿ ಮತ್ತಷ್ಟು ಐತಿಹಾಸಿಕ ಮಾಹಿತಿ ದೊರೆಯುವುದರಲ್ಲಿ ಯಾವುದೇ ಸಂದೇಹಗಳಿಲ್ಲ.

**ಪರಾಮರ್ಶನ ಗ್ರಂಥಗಳು:**


1. ಪೂಜಾರಿ ಸಿದ್ದರಾಜ, ಕಾಡದೇವರ ಜಯವಂತ., (1995), ಬೆಳವಲದ ಬೆಡಗು
2. ಲಠ್ಠೆ ಎಂ. ಎಸ್. (1977), ಸಾಹಿತ್ಯ ಸಂತುಷ್ಠಿ
3. ಶ್ರೀ ದೇಸಾಯಿ ಪಾಂಡುರಂಗರಾಯರು ರನ್ನನ ಮುದುವೊಳಲು–.
4. ಶೇಷಗಿರಿರಾವ್ ಡಿ. ವಿ. (1973) ರನ್ನ ಭಾಗ–1
5. ಸ್ಥಳೀಯ ಬಿವಿವಿಎಸ್ ಹೈಸ್ಕೂಲ್ ಶಿಕ್ಷಕರಾದ ಶ್ರೀ ಕೆ.ಎ. ದಡೂತಿ ಸರ್, ಶ್ರೀ ಎ.ಎಂ. ಕಂಬಾರ ಸರ್, ಶಿಕ್ಷಕರಾದ ಶ್ರೀ ಎಸ್. ಕೆ. ಹನಗಂಡಿ ಸರ್, ಸ್ಥಳೀಯ ಹಿರಿಯರಾದ ಶ್ರೀ ಆರ್. ಎಂ ನೀಲನ್ನವರ ರವರು ನೀಡಿದ ಮಾಹಿತಿ.
6. ಗೋಲಬಾಂವಿ ಸಕ್ಕುಬಾಯಿ., (2023), ರನ್ನ ಬೆಳಗಲಿ ಪಟ್ಟಣದ ಸಾಂಸ್ಕೃತಿಕ ಅಧ್ಯಯನ ಕಿರು ಪ್ರಬಂಧ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.